ಸಿ.ಸಿ..ನಂ.85/2024

ಪಿ.ಡಬ್ಲ್ಯೂ-1

ದಿನಾಂಕ.18-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಆರ್ ಟಿ ಜಿ ವಕೀಲರಿಂದಃ

1. ಯಾವುದೇ ಒಂದು ಪ್ರಕರಣದಲ್ಲಿ ಸಾಕ್ಷಿ ಹೇಳಬೇಕಾದರೆ ಸೌಹಾರ್ದ ಸಂಸ್ಥೆ ಯಲ್ಲಿ ಠರಾವು ಪಾಸು ಮಾಡಬೇಕಾಗುತ್ತದೆ ಎಂದರೆ ಸರಿ . ನಮ್ಮ ಪಿರ್ಯಾದಿದಾರರ ಸಂಸ್ಥೆಯಲ್ಲಿ ಈಗ 10 ಜನ ನಿರ್ದೇಶಕರು ಇರುತ್ತಾರೆ . 10 ಜನ ನಿರ್ದೇಶಕರು ಹಾಗೂ ಅಧ್ಯಕ್ಷರು ಸೇರಿಕೊಂಡು ಠರಾವು ಪಾಸು ಮಾಡಬೇಕಾಗುತ್ತದೆ ಎಂದರೆ ಸರಿ . ಆ ಠರಾವಿನಲ್ಲಿ ಎಲ್ಲಾ ನಿರ್ದೇಶಕರು ಅಧ್ಯಕ್ಷರು ಸಹಿ ಮಾಡಿ ಆ ಠರಾವಿನಂತೆ ಸಂಸ್ಥೆಯ ಪರವಾಗಿ ನ್ಯಾಯಾಲಯದ ಮುಂದೆ ಹಾಜರಾಗಿ ಪ್ರಕರಣ ನಡೆಸಲು ಅನುಮತಿ ಕೊಡುತ್ತಾರೆ ಎಂದರೆ ಸರಿ . ನಿಪಿ-6 ದಾಖಲಾತಿಯಲ್ಲಿ ಎಲ್ಲಾ ನಿರ್ದೇಶಕರ ಮತ್ತು ಅಧ್ಯಕ್ಷರ ಸಹಿ ಇರುವುದಿಲ್ಲ ಎಂದರೆ ಅದು ಯಥಾ ಪ್ರತಿ ಆಗಿರುತ್ತದೆ ಮೂಲ ಪ್ರತಿಯಲ್ಲಿ ಸಹಿ ಇರುತ್ತದೆ . ಯಾವುದೇ ಒಂದು ಠರಾವು ಪಾಸು ಮಾಡಿದಾಗ ಪಿರ್ಯದಾರರ ಸಂಸ್ಥೆಯಲ್ಲಿ ಆ ಠರಾವಿನಲ್ಲಿ reference number ನಮೂದು ಮಾಡಲಾಗುತ್ತದೆ ಎಂದರೆ ಠರಾವಿನ ನಂಬರ ನಮೂದು ಮಾಡುತ್ತೇವೆ ಆದರೆ ಆವಕ ಜಾವಕ ನಂಬರ ನಮೂದು ಮಾಡುವುದಿಲ್ಲ . ನಿಪಿ-6 ರದಾಖಲಾತಿಯಲ್ಲಿ ಆವಕ ಜಾವಕ ಗಳ ನಂಬರ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ನಿಪಿ-6 ನ್ನು ಸೃಷ್ಟಿ ಮಾಡಿಕೊಂಡಿದ್ದು ನಿಮಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ .

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ABN ಹಾಕಲಾಗಿರುತ್ತದೆಯಾ ಎಂದರೆ ಹೌದು ಸಾಕ್ಷಿ ಪುನಃ ಮುಂದುವರೆದು ಈ ಬಗ್ಗೆ ಅವಾರ್ಡ ಸಹ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ . ನಮ್ಮ ಪಿರ್ಯಾದಿದಾರರ ಸಂಸ್ಥೆಯು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಸಂಘದ ನಿರ್ದೇಶನದಲ್ಲಿ ಕೆಲಸ ಮಾಡುತ್ತೇವೆ . ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಸಂಘ RBI ನಿರ್ದೇಶನ ಪಾಲಿಸುವುದಿಲ್ಲವಾ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ .

3. ಸಾಲಕ್ಕೆ ಸಂಬಧಿಸಿದಂತೆ  ಬದ್ರತಾ ಸಾಲ ಮತ್ತು ಬದ್ರತಾ ರಹಿತ ಸಾಲಗಳು ಇರುತ್ತವೆ ಎಂದರೆ ಸಾಲದಲ್ಲಿ ವಿಧಗಳು ಇರುತ್ತದೆ. ಆದರೆ ಈ ರೀತಿ ಸಾಲದ ವಿಧಗಳು ಇಲ್ಲ . ಬದ್ರತಾ ಸಾಲಕ್ಕೆ ಶೇ 10 ರಷ್ಟು  ಬದ್ರತಾ ರಹಿತ ಸಾಲಕ್ಕೆ ಶೇ 12 ರಷ್ಟು  ಬಡಿ ವಿಧಿಸುವಂತೆ RBI ದಿಂದ ನಿರ್ದೇಶನ ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ . ನನ್ನ ಪ್ರಕಾರ ಆರೋಪಿಗೆ  ನೀಡಿದ ಸಾಲವು  easymoney ಸಾಲವಾಗಿರುತ್ತದೆ . ನಿಮ್ಮ ಸಂಸ್ಥೆ ಯಿಂದ  ಶೇ 30 ರಷ್ಟು ಬಡ್ಡಿಯನ್ನು ವಿಧಿಸಿರುತ್ತೀರಿ ಎಂದರೆ ಇಲ್ಲ .ನನ್ನ ಪ್ರಕಾರ ಅರೋಪಿ ರೂ 5 ಲಕ್ಷ ಸಾಲ ನಮ್ಮ ಸಂಸ್ಥೆ ಯಿಂದ ಪಡೆದುಕೊಂಡಿರುತ್ತಾನೆ . ನಿಪಿ-8 ರಲ್ಲಿ ಕಾಣಿಸಿದಂತೆ ಶೇ 30 ರಷ್ಟು ಬಡಿ ವಿಧಿಸಿರುತ್ತೀರಿ ಎಂದರೆ ಅದು ಬಿಡ್ ದರವಾಗಿರುತ್ತದೆ.  ನಿಪಿ-8 ರ ದಾಖಲಾತಿಯಲ್ಲಿರುವ ಬಡ್ಡಿ ದರ ಎಂದು ಬರೆದಿರುವ ಅಕ್ಷರವನ್ನು ಬಿಡ್ ದರ ಎಂದು ಬದಲಾಯಿಸಲು ತೊಂದರೆ ಇತ್ತಾ ಎಂದರೆ ನನ್ನ ಗಮನಕ್ಕೆ ಈಗ ಬಂದಿರುತ್ತದೆ .  ನೀವು ಸಾಲಗಾರರಿಗೆ ಸಾಲಕೊಡುವ ಸಮಯದಲ್ಲಿ ಎಲ್ಲಾ ದಾಖಲಾತಿ ನೋಡಿ ಸಾಲ ಕೊಡುತ್ತೀರಿ ಎಂದರೆ ಸರಿ . ಹಾಗಾಗಿ ನಿಪಿ-8 ರ ದಾಖಲಾತಿಯಲ್ಲಿ ಬಡ್ಡಿ ದರ ಶೇ 30 ಎಂದು ನಮೂದು ಮಾಡಿ ಈಗ ಅದನ್ನು ಬಿಡ್ ದರ ಎಂದು ಸಮಜಾಯಿಸಿ   ಹಾರಿಕೆಯ ಉತ್ತರ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ . 5. ಸಾಲಗಾರರಿಗೆ ಸಾಲದ ಅವಶ್ಯಕತೆ ಇದ್ದಲ್ಲಿ ನಿಗದಿತ ನಮೂನೆಯಲ್ಲಿ ಸಾಲದ ಅರ್ಜಿ ಸಲ್ಲಿಸಬೇಕಾಗತ್ತುದೆ ಎಂದರೆ ಸರಿ . ಆ ಸಾಲದ ಅರ್ಜಿಯಲ್ಲಿ  ಎಷ್ಟು ಸಾಲ ಪಡೆಯುತ್ತೇನೆ ಮತ್ತು ನೀವು ವಿಧಿಸುವ ಬಡಿಡ ದರ ಎಷ್ಟು ದರ ಎಂದು ನಮೂದಿಸಬೇಕಾಗುತ್ತದೆ ಎಂದರೆ ಅವಶ್ಯಕ ಮಾಹಿತಿಯಲ್ಲಿ ಅದನ್ನು ನಮೂದಿಸಲಾಗಿರುತ್ತದೆ . ನಿಪಿ-7 ರಲ್ಲಿ ಸಹ ಬಡ್ಡಿ ದರ ಶೇ 30 ಎಂದು ನಮೂದು ಮಾಡಿರುತ್ತೀರಿ ಎಂದರೆ ಅದು ಬಿಡ್ ದರವಾಗಿರುತ್ತದೆ . ಆರೋಪಿಯು   ಯಾವ ದಿನಾಂಕದಂದು ಸಾಲದ ಅರ್ಜಿ ಸಲ್ಲಿಸಿರುತ್ತಾನೆ ಎಂದು ನನಗೆ ನೆನಪಿಲ್ಲ . ಸಾಲದ ಅರ್ಜಿಯಂತೆ   ಸಾಲದ ಅನುಮೋದನೆಯಾಗಿ ಎಷ್ಟು ದಿನದ ಬಳಿಕ ಸಾಲವನ್ನು ಮಂಜೂರು ಮಾಡಲಾಗುತ್ತದೆ ಎಂದರೆ ಬಿಡ್ ದಿನಾಂಕವನ್ನು ನಮಾದಿಸುತ್ತಾರೆ  ಅತ್ಯಧಿಕ ಬಿಡ್ ನಲ್ಲಿ ಯಾರು ಖರಿದಿ ಮಾಡುತ್ತಾರೊ ಅವರಿಗೆ ಸಾಲ ನೀಡಲಾಗುತ್ತದೆ . ಸಾಲ ನೀಡುವಾಗ ಸಾಲಗಾರನಿಂದ  ಎಪ್.ಡಿ, ಶೇರು ,ಇನ್ಸೂರೆನ್ಸ  ದಾಖಲಾತಿಗಳನ್ನು ಪಡೆದುಕೊಂಡಿರುತ್ತೀರಿ ಎಂದರೆ ಅವಶ್ಯಕವಾಗಿರುವ ದಾಖಲಾತಿ ನಾನು ಪಡೆದುಕೊಳುತ್ತೇವೆ . ನನ್ನ ಪ್ರಕಾರ ಶೇ 16 ರಂತೆ ವಾರ್ಷಿಕ ಬಡ್ಡಿ  ಹಾಗೂ  ಕ್ಯಾಷ ಸರ್ಟಿಫಿಕೇಟ್ ಗೆ  ಈಗ

ಶೇ 11 ರಷ್ಟು ಬಡ್ಡಿಯನ್ನು  ಕೊಡುತ್ತೇವೆ .ಆರೋಪಿಯು ಸಾಲ ತೆಗೆದುಕೊಳ್ಳುವಾಗ ಎಷ್ಟು  ಕ್ಯಾಶ್ ಸರ್ಟಿಫಿಕೇಟ್  ಎಷ್ಟು ವಿಮಾ ಬಾಂಡ್ ಮತ್ತು ಎಷ್ಟು ಎಪ್. ಡಿ ಇಟ್ಟಿದ್ದರು ಎಂದರೆ ನನಗೆ ನೆನಪಿಲ್ಲ.  ನನ್ನ ಪ್ರಕಾರ ಆರೋಪಿಯು  ಯಾವ ದಿನಾಂಕದಂದು ಹಣವನ್ನು ಸಾಲದ ಅರ್ಜಿಯನ್ನು ಸಲ್ಲಿಸಿದ್ದ ಎಂದು ನೆನಪಿಲ್ಲ.

( ಈ ಹಂತದಲ್ಲಿ ಆರೋಪಿ  ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.